**ಓ ಎಸ್ ನಂಃ 167-15** **ಪಿಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕಃ 19.08.2019 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ ಎಸ್ ಬಿ ವಕೀಲರಿಂದ ಪ್ರತಿವಾದಿಗಳ ಪರವಾಗಿಃ-**

..4.. ನಾನು 8 ನೇ ತರಗತಿಯನ್ನು ಪಾಸ್ ಮಾಡಿದ್ದೇನೆ. ನನಗೆ ಕನ್ನಡ-ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ಈ ದಿನದ ಪ್ರಮಾಣ ವಚನವನ್ನು ನಾನೇ ಓದಿ ಹೇಳಿದ್ದೇನೆ. ಸರ್ವೆ ನಂಬರುಗಳು ಗೊತ್ತಿವೆ. ತಾರಿಹಾಳದಲ್ಲಿರುವ ಜಮೀನಿನ ಸರ್ವೆ ನಂಃ 52/1, ಕ್ಷೇತ್ರ ಅದು 6 ಎಕರೆ ಇದೆ. ಸ ನಂಃ 77, 75, 162/1, 162/3, 37, 55. ಪ್ಲಾಟ ನಂಃ 85/ಬ, ಬ್ಲಾಕ ನಂಃ 90, ಮನೆ ನಂಃ 46, 49, 50, ಎರಡು ಟ್ರ್ಯಾಕ್ಟರುಗಳು, ಟ್ರೇಲರುಗಳು, ಗುರಾ, 2 ಬಿತ್ತುವ ಕುರಿಗೆಗಳು, 2 ರೆಂಟಿ, 6 ಎತ್ತುಗಳು, 6 ಎಮ್ಮೆಗಳು, 10 ಆಕಳುಗಳು ಇವೆ. ಇವಿಷ್ಟು ಹೊರತುಪಡಿಸಿದರೆ ಬೇರೆ ಇಲ್ಲಾ. ಈ ಟ್ರ್ಯಾಕ್ಟರ ಹಾಗೂ ಟ್ರೇಲರುಗಳು 2 ನೇ ಪ್ರತಿವಾದಿಗಳ ಹೆಸರಿನಲ್ಲಿವೆ. ಅವುಗಳ ನಂಬರುಗಳು ಹಾಗೂ ಆರ್ ಸಿ ಪುಸ್ತಕ ಹಾಜರಪಡಿಸಿಲ್ಲ ಎಂದರೆ ಸರಿ. ಈ ಎರಡು ಟ್ರಾಕ್ಟರ ಹಾಗೂ ಟ್ರೇಲರುಗಳು ಅವುಗಳ ಮಾಡೆಲಗಳ ಕುರಿತು ವಾದ ಪತ್ರದಲ್ಲಿ ನಮೂದಿಸಿಲ್ಲವೆಂದರೆ ಸರಿ. ಎತ್ತುಗಳು 2 ಪ್ರತಿವಾದಿಗೆ -2, 3 ನೇ ಪ್ರತಿವಾದಿಗೆ-2 ಹಾಗೂ ನಮಗೆ 2 ಎತ್ತುಗಳು. ವಾದ ಪತ್ರದಲ್ಲಿ 2 ಜೊತೆ ಎತ್ತುಗಳು ಅಂತಾ ಬರೆಸಿದ್ದೇವೆಂದರೆ ಸರಿ. 8 ಎಮ್ಮೆಗಳು ಹಾಗೂ 10 ಆಕಳುಗಳು ಅಂತಾ ವಾದ ಪತ್ರದಲ್ಲಿ ಬರೆಸಿರುತ್ತೇನೆ, ಆ ರೀತಿ ನಾನು ಬರೆಸಿಲ್ಲವೆಂದರೆ ಸರಿ. 10 ಆಕಳುಗಳು ಇವೆ ಅಂತಾ ಬರೆಸಿಲ್ಲವೆಂದರೆ ಸರಿ.

..5.. ದಾವಾ ಹಾಕುವ ಕಾಲಕ್ಕೆ 407 ವಾಹನ ಯಾರ ಹೆಸರಿನಲ್ಲಿತ್ತು ಅಂತಾ ತೋರಿಸಲು ದಾಖ್ಲೆ ಹಾಜರಪಡಿಸಿಲ್ಲವೆಂದರೆ ಸರಿ. ಈ ದಾವಾ ಹಾಕುವ ಮೊದಲೇ ಸದರಿ ವಾಹನ ಮಾರಾಟವಾಗಿ ಹೋಗಿತ್ತು ಎಂದರೆ ಸರಿಯಲ್ಲ. ಮಾರುತಿ ಓಮನಿ ವಾಹನ ನಂಬರ ಗೊತ್ತಿಲ್ಲ, ಅದು ಯಾರ ಹೆಸರಿನಲ್ಲಿತ್ತು ಅಂತಾ ತೋರಿಸಲು ದಾಖಲೆ ಹಾಜರಪಡಿಸಿಲ್ಲವೆಂದರೆ ಸರಿ. ನಮ್ಮ ಮನೆತನಕ್ಕೆ ಆ ವಾಹನ ಯಾವತ್ತೂ ಇರಲಿಲ್ಲವೆಂದರೆ ಸರಿಯಲ್ಲ. ಅನುಬಂದ-ಇ ದಲ್ಲಿ ತೋರಿಸಿದ ಆಸ್ತಿಗಳು ಅಸ್ತಿತ್ವದಲ್ಲಿವೆ ಅಂತಾ ತೋರಿಸಲು ನಾನು ಯಾವುದೇ ದಾಖಲೆ ಹಾಜರಪಡಿಸಿಲ್ಲವೆಂದರೆ ಸರಿ.

..6.. ಶ್ರೀ ಎನ್ ಎಂ ಪಾಟೀಲ, ವಕೀಲರು ನನ್ನ ಅಳಿಯ ಎಂದರೆ ಸರಿ. ಅವರು ತಾರಿಹಾಳ ಗ್ರಾಮದಲ್ಲಿ ವಾಸವಾಗಿದ್ದಾರೆಂದರೆ ಸರಿ. ತಾರಿಹಾಳ ಗ್ರಾಮದಲ್ಲಿ ನಡುವಿನ ಓಣಿಯಲ್ಲಿ ಒಂದು ಮನೆ ಇದ್ದು, ಅದರಲ್ಲಿ ನಾನು ವಾಸವಾಗಿದ್ದೇನೆಂದರೆ ಸರಿ.

**ಓ ಎಸ್ ನಂಃ 167-15** **ಪಿಡಬ್ಲ್ಯೂ-1**

ವಾದಿಗಳು ನಾವು ಒಂದೆ ಮನೆಯಲ್ಲಿದ್ದೇವೆಂದರೆ ಸರಿ. 2 ನೇ ಪ್ರತಿವಾದಿ ನಡುವಿನ ಓಣಿಯಲ್ಲಿರುವ ಇನ್ನೊಂದು ಮನೆಯಲ್ಲಿ ವಾಸವಾಗಿದ್ದಾನೆ ಅಂತಾ ಮಾಡಿದ ಸಲಹೆಗೆ ಎಲ್ಲಿರುತ್ತಾನೆ ಅಂತಾ ಗೊತ್ತಿಲ್ಲವೆಂದು ನುಡಿಯುತ್ತಾಳೆ. ನಡುವಿನ ಓಣಿಯಲ್ಲಿ ಒಟ್ಟು 3 ಮನೆಗಳು ಇವೆ. ಶ್ರೀ ಎನ್ ಎಂ ಪಾಟೀಲ, ವಕೀಲರು ತಾರಿಹಾಳ ಗ್ರಾಮದಲ್ಲಿರುವ ಶೃತಿನಗರದಲ್ಲಿರುವ ಮನೆಯಲ್ಲಿರುತ್ತಾರೆ. ಅದು ಸಹ ನಮ್ಮದೇ ಆಸ್ತಿಯಾಗಿದೆ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುತ್ತೇವೆಂದರೆ ಸರಿ. ವಕೀಲರು ಸದರಿ ಮನೆಗೆ ಭಾಡಿಗೆ ಕೊಡುವುದಿಲ್ಲ. ವಕೀಲರಿಗೆ ಆ ಮನೆಯಲ್ಲಿರಲು ನಾನೇ ಅವಕಾಶ ಮಾಡಿಕೊಟ್ಟಿರುತ್ತೇನೆ ಅಂತಾ ಮಾಡಿದ ಸಲಹೆಗೆ, ಸಾಕ್ಷಿದಾರಳು 2 ನೇ ಪ್ರತಿವಾದಿ ಅವಕಾಶ ಮಾಡಿಕೊಟ್ಟಿರುತ್ತಾನೆಂದು ನುಡಿಯುತ್ತಾಳೆ. ಆ ಕುರಿತು ನಾನು ಯಾವುದೇ ದಾಖಲೆ ಹಾಜರಪಡಿಸಿಲ್ಲವೆಂದರೆ ಸರಿ. ಸದರಿ ಮನೆಯಲ್ಲಿರಲು ವಕೀಲರಿಗೆ ಮಾಲ್ಕಿ ಹಕ್ಕು ಇಲ್ಲವೆಂದರೆ ಸರಿ.

..7.. ಈ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ವಕೀಲರ ಮೇಲೆ ದೂರುಗಳು ದಾಖಲಾಗಿದ್ದು, ಅವರು ನಮ್ಮ ಮೇಲೆ ದೂರುಗಳನ್ನು ಸಲ್ಲಿಸಿದ್ದಾರೆ ಅವುಗಳು ನ್ಯಾಯಾಲಯದಲ್ಲಿವೆಂದರೆ ಸರಿ. ಕೆಲವು ದಿನಗಳಿಂದ 2 ನೇ ಪ್ರತಿವಾದಿ, 3 ನೇ ಪ್ರತಿವಾದಿ ಹಾಗೂ ವಕೀಲರ ಹಾಗೂ ನಮ್ಮ ನಡುವೆ ಮನಸಾ ಮನಸಾ ಸರಿ ಇಲ್ಲವೆಂದರೆ ಸರಿಯಲ್ಲ. 2 ನೇ ಪ್ರತಿವಾದಿ ಹಾಗೂ ಆತನ ಮಕ್ಕಳು ನನ್ನನ್ನು ಕೊಲೆ ಮಾಡಲು ಪ್ರಯತ್ನಿಸಿದರು ಅಂತಾ ಹೇಳಿಕೊಂಡು ನಾನು ದೂರು ಸಲ್ಲಿಸಿದ್ದಾರೆಂದರೆ ಸರಿ, ಸಾಕ್ಷಿ ಸ್ವತಃ ಅವರು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ ಅದಕ್ಕಾಗಿ ಹಾಕಿದ್ದೇನೆ. ನಮ್ಮ ಹಾಗೂ ಪ್ರತಿವಾದಿಗಳ ನಡುವೆ ಮಾತುಕತೆ ಇಲ್ಲವೆಂದರೆ ಸರಿಯಲ್ಲ. 3 ನೇ ಪ್ರತಿವಾದಿ ನಾವು ಇರುವಂತಹ ಮನೆಯಲ್ಲಿ ನಮ್ಮ ಜೊತೆಗೆ ಇದ್ದಾರೆ. ನಮ್ಮ, 2 ಹಾಗೂ 3 ನೇ ಪ್ರತಿವಾದಿಗಳ ಕುಟುಂಬದ ಪಡಿತರ ಚೀಟಿಗಳು ಬೇರೆ ಬೇರೆ ಇವೆ ಎಂದರೆ ಹೌದು ಅಂತಾ ಹೇಳಿ, ಚನ್ನಪ್ಪ ಕಲ್ಲಪ್ಪ ಕಟ್ಟಿ ರವರೆ ಮಾಡಿಸಿರುತ್ತಾರೆ ಅಂತಾ ನುಡಿಯುತ್ತಾಳೆ.

**ಈ ಹಂತದಲ್ಲಿ ಕೋರಿಕೆಯ ಮೇರೆಗೆ ಪಾಟಿ ಸವಾಲಿಗಾಗಿ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**